ವೆಚ್ಚವನ್ನು ಕಡಿಮೆಗೊಳಿಸಬಹುದಾಗಿದೆ ಹಾಗಾಗಿ ರಾಯಚೂರು, ಹಾವೇರಿ ಮತ್ತು ಹೊಸಪೇಟೆ ಪಟ್ಟಣಗಳಲ್ಲಿ ಸ್ವಾದೀನ ಪಡಿಸಿಕೊಳ್ಳಲು ಆಯ್ಕೆ ಮಾಡಿರುವ ಭೂಮಿಗೆ ಪುನರ್ ವಸತಿ ನಕ್ಷೆಯನ್ನು ತಯಾರಿಸಲಾಗಿರುವುದರಿಂದ, ಈ ಪಟ್ಟಣಗಳನ್ನು ಮೊದಲನೇ ಕಂತಿನಲ್ಲಿ ತೆಗೆದುಕೊಳ್ಳಲಾಗುತ್ತಿದೆ ಉಳಿದ ಪಟ್ಟಣಗಳಿಗೆ, ಸಿಂಧನೂರನ್ನು ಸೇರಿಸಿ, ಕಾಮಗಾರಿಗಳ ಅನುಷ್ಟಾನಪಡಿಸುವ ಸ್ಥಿತಿಯನ್ನಧರಿಸಿ, ಮುಂದಿನ ಕಂತುಗಳಲ್ಲಿ ತೆಗೆದುಕೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1090(1520)**
ಸದಸ್ಯರ ಹೆಸರು **ಶ್ರೀ ಬಾಲರಾಜ್ ಎಸ್(ಕೊಳ್ಳೆಗಾಲ)**
ಉತ್ತರಿಸುವ ಸಚಿವರು **ಶ್ರೀ ಬಿ ಶ್ರೀರಾಮುಲು(ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ಕೊಳ್ಳೇಗಾಲ ಕ್ಷೇತ್ರದ ತಾಲ್ಲೂಕು ಕೇಂದ್ರ ಹಾಗೂ ಪ್ರವಾಸಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಿಸುವಂತೆ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಹೌದು

ಆ) ಬಂದಿದ್ದರೆ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಹೌದು, ಶೌಚಾಲಯ ಹಾಗೂ ಇತರ ಪ್ರವಾಸಿ ಸೌಲಭ್ಯಗಳನ್ನು ನಿರ್ಮಿಸಲು ಸೂಕ್ತವಾದ ನಿವೇಶನ ಹಾಗೂ ಜಮೀನುಗಳನ್ನು ಒದಗಿಸುವಂತೆ ಚಾಮರಾಜನಗರ ಜಿಲ್ಲಾಡಳಿತವನ್ನು ಕೋರಲಾಗಿದೆ ಸದರಿಯವರಿಂದ ಸೂಕ್ತ ನಿವೇಶನ ದೊರೆತ ಕೂಡಲೇ ಈ ದಿಶೆಯಲ್ಲಿ ಕ್ರಮ ಕೈಗೊಳ್ಳಲಾಗುವುದು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ **1094(1359)**
ಸದಸ್ಯರ ಹೆಸರು **ಶ್ರೀ ಬಸವರಾಜ್ ರಾಯರೆಡ್ಡಿ (ಯಲಬುರ್ಗ)**
ಉತ್ತರಿಸುವ ಸಚಿವರು **ಶ್ರೀ ಬಿ ಶ್ರೀರಾಮುಲು (ಪ್ರವಾಸೋದ್ಯಮ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಅ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿ ಪ್ರಾರಂಭವಾಗಿದೆಯೆ,

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಯು ದಿನಾಂಕ 2 07 2005 ರಂದು ಪ್ರಾರಂಭವಾಗಿದೆ

ಆ) ಪ್ರಾರಂಭವಾಗಿದ್ದಲ್ಲಿ, ಈವರೆಗಿನ ಪ್ರಗತಿ ಏನು,

ಇದುವರೆವಿಗೂ, ರನ್‌ವೇ, ಟ್ಯಾಕ್ಸಿ ವೇ ಮತ್ತು ಏಪ್ರಾನ್ ಪ್ರದೇಶದಲ್ಲಿ ಗ್ಯಾನ್ಯುಲಾರ್ ಸಬ್ ಬೇಸ್ ಹಾಕುವ ಕಾರ್ಯವು ಸೇರಿಕೊಂಡಂತೆ ಕೆಲಸ ಪೂರ್ಣಗೊಂಡಿದೆ ರನ್ ವೇಗ ಡಾಂಬರೀಕರಣವು ಹಾಗೂ ಏಪ್ರಾನ್ ಪ್ರದೇಶಕ್ಕೆ ಕಾಂಕ್ರೀಟ್ ಪೇವ್‌ಮೆಂಟ್ ಕೆಲಸವು ಸಾಗುತ್ತಿದೆ ಹಾಗೆಯೇ, ಟರ್ಮಿನಲ್ ಕಟ್ಟಡ, ATC ಕಟ್ಟಡಗಳಿಗೆ ಕಾಂಕ್ರೀಟ್ ಹಾಕುವ/ಮೇಲ್ಚಾವಣಿ ಕೆಲಸವು ಸಹ ತ್ವರಿತಗತಿಯಲ್ಲಿ ಸಾಗಿವೆ ಮೆಕಾನಿಕಲ್ ನಿರ್ವಹಣೆ ಕಟ್ಟಡ, ಏರ್‌ಕ್ರಾಫ್ಟ್ ರಕ್ಷಣೆ ಮತ್ತು ಅಗ್ನಿ ಶಾಮಕ ಕಟ್ಟಡ, ಮುಖ್ಯ ವಿದ್ಯುಚ್ಛಕ್ತಿ ಸಬ್–ಸ್ಟೇಷನ್, ಐಟಿ ವ್ಯವಸ್ಥೆ, ಸುರಕ್ಷಿತ ಮತ್ತು ಭದ್ರತೆ ವ್ಯವಸ್ಥೆ, ವೈಮಾನಿಕ ಕ್ಷೇತ್ರಕ್ಕೆ ಬೆಳಕು ಒದಗಿಸುವ ಸಾಮಗ್ರಿ ಈ ಕಾರ್ಯಗಳೆಲ್ಲ ಪ್ರಾರಂಭಗೊಂಡಿವೆ

ಇ) ಈ ಕಾಮಗಾರಿಯು ಯಾವಾಗ ಮುಗಿಯುತ್ತದೆ ಹಾಗೂ ಇದಕ್ಕಾಗಿ ಎಷ್ಟು ಎಕರೆ ಜಮೀನನ್ನು ಒದಗಿಸಲಾಗಿದೆ,

ಈ ಕಾಮಗಾರಿಯು ಮಾರ್ಚ್ 2008ರ ಅಂತ್ಯಕ್ಕೆ ಮುಗಿಯುತ್ತದೆ ಇದಕ್ಕಾಗಿ ಒಟ್ಟು 4006 38 ಎಕರೆ ಜಮೀನನ್ನು ಒದಗಿಸಲಾಗಿದೆ

ಈ) ಇದರಲ್ಲಿ ಸರ್ಕಾರಿ ಹಾಗೂ ಖಾಸಗೀ ಜಮೀನು ಎಷ್ಟು,

ಇದರಲ್ಲಿ 1754 ಎಕರೆ ಸರ್ಕಾರಿ ಜಮೀನು ಹಾಗೂ 2252 38 ಎಕರೆ ಖಾಸಗಿ ಜಮೀನು

ಉ) ಖಾಸಗಿ ಜಮೀನು ಮಾಲೀಕರಿಗೆ ಸರ್ಕಾರವು ಯಾವ ರೀತಿಯ ಪರಿಹಾರವನ್ನು ಒದಗಿಸಲಾಗಿದೆ ಹಾಗೂ ಇದರಿಂದ ತೊಂದರೆ ಗೊಳಗಾದ ಜಮೀನು ಮಾಲೀಕರಿಗೆ ಪರಿಹಾರವನ್ನು ಪೂರ್ಣವಾಗಿ ನೀಡಲಾಗಿದೆಯೆ

1999–2000ರಲ್ಲಿ ಮೊದಲ ಹಂತದ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಖಾಸಗೀ ಜಮೀನು ಮಾಲೀಕರಿಗೆ ಸರ್ಕಾರವು ಎಕರೆ ಒಂದಕ್ಕೆ ರೂ 5 00 ಲಕ್ಷದಂತೆ ಪರಿಹಾರವನ್ನು ಒದಗಿಸಿದೆ ಇದಲ್ಲದೆ, ಜಮೀನಿನಲ್ಲಿರುವ ಮರಮುಟ್ಟುಗಳ ಹಾಗೂ ಕಟ್ಟಡಗಳಿಗೆ ಪರಿಹಾರ ಧನವನ್ನು ಸಹ ನೀಡಲಾಗಿದೆ 2006–07 ರಲ್ಲಿ ಸ್ವಾಧೀನ ಪಡಿಸಿಕೊಂಡ ಹೆಚ್ಚುವರಿ 168 ಎಕರೆ ಭೂಮಿಗೆ ಪ್ರತಿ ಎಕರೆಗೆ ಸರಾಸರಿ ರೂ 25–30 ಲಕ್ಷಗಳಷ್ಟು ಪರಿಹಾರ ಒದಗಿಸಲಾಗಿದೆ ಮೊದಲ ಹಂತದ ಭೂಸ್ವಾಧೀನಕ್ಕೆ ಸಂಪೂರ್ಣ ಹಣ ಪಾವತಿ ಮಾಡಿದ್ದು, ಹೆಚ್ಚುವರಿ ಭೂಮಿಗೆ ಪರಿಹಾರ ಪಾವತಿಯು ಅಂತಿಮ ಹಂತದಲ್ಲಿದೆ ಅಲ್ಲದೆ, ತೊಂದರೆಗೊಳಗಾದ ಜಮೀನು ಮಾಲೀಕರಿಗೆ ಸರ್ಕಾರವು ಪುನರ್ವಸತಿ ಬಡಾವಣೆಯನ್ನು ದೇವನಹಳ್ಳಿ ತಾಲ್ಲೂಕಿನ ಸಮೀಪದ ಬಾಲೆಪುರ ಗ್ರಾಮದಲ್ಲಿ ನಿರ್ಮಿಸಿ, ಉಚಿತ ನಿವೇಶವನ್ನು ಒದಗಿಸಿ ಕೊಡಲಾಗಿದೆ

ಇದರ ಜೊತೆಗೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ, ಶಾಲಾ ಕಟ್ಟಡ ಅಂಗನವಾಡಿ ಕಟ್ಟಡ ಮತ್ತು ಮೂರು ದೇವಸ್ಥಾನಗಳನ್ನು ಪುನರ್ ನಿರ್ಮಿಸಲಾಗಿದೆ

ಊ) ನೀಡದೆ ಇದ್ದಲ್ಲಿ, ಪರಿಹಾರ ನೀಡುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮವೇನು,

ಉದ್ಭವಿಸುವುದಿಲ್ಲ

ಋ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಾಮಗಾರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅನುದಾನದ ಪಾಲೇನು (ಪೂರ್ಣ ವಿವರವನ್ನು ನೀಡುವುದು),

ಇದು ಒಂದು ಜಂಟಿ ಉದ್ಯಮ ಯೋಜನೆಯಾಗಿದ್ದು, ಇದರಲ್ಲಿ ಷೇರು ಬಂಡವಾಳದ ಪಾಲುಗೊಳ್ಳುವಿಕೆಯಂತೆ, ಭಾರತ ಸರ್ಕಾರದ ಪರವಾಗಿ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರ, ರಾಜ್ಯ ಸರ್ಕಾರದ ಪರವಾಗಿ KSIIDC ಸಂಸ್ಥೆ ಮತ್ತು ಖಾಸಗಿ ಪಾಲುದಾರರುಗಳಾದ ಜರ್ಮನಿಯ ಸೀಮೆನ್ಸ್ ಯೋಜನೆ – ಉದ್ಯಮ, ಸ್ವಿಡ್ಜರ್‌ಲ್ಯಾಂಡಿನ ಯೂನಿಕ್ ಜೂರಿಕ್ ವಿಮಾನ ನಿಲ್ದಾಣ, ಭಾರತದ L&T ಸಂಸ್ಥೆಗಳು ಸೇರಿವೆ ಇದರಲ್ಲಿ ಸೀಮೆನ್ಸ್ ಯೋಜನೆ ಷೇರು–ಶೇ 40, ಯೂನಿಕ್ ಜೂರಿಕ್ ವಿಮಾನ ನಿಲ್ದಾಣದ ಷೇರು–ಶೇ 17 L&T ಸಂಸ್ಥೆಯ ಷೇರು – ಶೇ 17 ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ ಷೇರು–ಶೇ 13 ಮತ್ತು KSIIDC ಯ ಷೇರು–ಶೇ 13 ರಾಜ್ಯ ಸರ್ಕಾರವು ಈ ಯೋಜನೆಗೆ ರೂ 350 ಕೋಟಿಗಳಷ್ಟು ಬಡ್ಡಿರಹಿತ ರಾಜ್ಯ ಬೆಂಬಲ ಸಾಲವನ್ನು ಒದಗಿಸಿ ಇದರ ಮರು ಪಾವತಿಗೆ 20 ವರ್ಷಗಳ ಕಾಲಾವಧಿಯನ್ನು ನಿಗಧಿಪಡಿಸಿ ಮೊದಲ 10 ವರ್ಷಕ್ಕೆ ಮೊರೆಟೋರಿಯಂ ನೀಡಿರುತ್ತದೆ

ಎ) ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮವಾದ ಮತ್ತು ನೇರ ರೈಲು ಸಂಪರ್ಕ ಹಾಗೂ ಎಕ್ಸ್‌ಪ್ರೆಸ್ ಹೈವೇ ಮಾರ್ಗವನ್ನು ರೂಪಿಸಲು ಸರ್ಕಾರವು ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ?

ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸುಗಮವಾದ ಮತ್ತು ನೇರ ರೈಲು ಸಂಪರ್ಕ ಸ್ಥಾಪಿಸಲು ಒಂದು ಕಾರ್ಯ ಸಾಧ್ಯ / ಯೋಜನಾ ವರದಿಯನ್ನು ತಯಾರಿಸಲು ದೆಹಲಿ ಮೆಟ್ರೋ ರೈಲ್ ಕಾರ್ಪೊರೇಷನ್ ಸಂಸ್ಥೆಗೆ ವಹಿಸಲಾಗಿದೆ ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರದಿಂದ ಎಕ್ಸ್‌ಪ್ರೆಸ್ ಹೈವೆ ಸ್ಥಾಪಿಸುವ ಬಗ್ಗೆ ಅಲೈನ್‌ಮೆಂಟ್ ಕಾರ್ಯ ಕೈಗೊಳ್ಳಲಾಗುತ್ತಿದೆ